**ದಿನಾಂಕ 07.11.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ 3 ಮತ್ತು 4 ನೇ ಎದುರುದಾರರ ಪರವಾಗಿ ಶ್ರೀ ಎಸ್.ವಿ.ಎಂ. ವಕೀಲರಿಂದಃ**

1. ಅಪಘಾತವು ಕೆಎ.13.ಟಿಸಿ.4898 ನೇ ಟ್ರಾಕ್ಟರ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ. 3 ನೇ ಎದುರುದಾರರ ಕಡೆಯಿಂದ 1 ನೇ ಎದುರುದಾರರು ಟ್ರೈಲರ್ ನ್ನು ಬಾಡಿಗೆಗೆ ತೆಗೆದುಕೊಂಡಿದ್ದರು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಕೆಎ.44.ಟಿಎ.2428 ನೇ ಟ್ರೈಲರ್ ಅಪಘಾತದ ಸಮಯದಲ್ಲಿ 1 ನೇ ಎದುರುದಾರರ ವಶದಲ್ಲಿ ಇತ್ತು ಎಂದರೆ ನನಗೆ ಮಾಹಿತಿ ಇಲ್ಲ. 3 ನೇ ಎದುರುದಾರರು 4 ನೇ ಎದುರುದಾರರ ಕಡೆಯಿಂದ ಕೆಎ.44.ಟಿ.1801 ನೇ ವಾಹನಕ್ಕೆ ಪಾಲಿಸಿಯನ್ನು ಪಡೆದುಕೊಂಡಿದ್ದರು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಕೆಎ.44.ಟಿ.1801 ನೇ ಟ್ರಾಕ್ಟರ್ ಗೆ ಟ್ರೈಲರ್ ಕೆಎ.44.ಟಿಎ.2428 ನ್ನು ಜೋಡಣೆ ಮಾಡಲಾಗಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಕೆಎ.44.ಟಿ.1801 ನೇ ಟ್ರಾಕ್ಟರ್ ಮತ್ತು ಟ್ರೈಲರ್ ಕೆಎ.44.ಟಿಎ.2428 ನ್ನು ವ್ಯವಸಾಯದ ಉದ್ದೇಶಕ್ಕೆ ತೆಗೆದುಕೂಂಡಿದ್ದು, ಅದೇ ಉದ್ದೇಶದಿಂದ ಅದಕ್ಕೆ ವಿಮೆ ಮಾಡಿಸಲಾಗಿದ ಎಂದರೆ ನನಗೆ ಗೊತ್ತಿಲ್ಲ.
2. ಷರತ್ತುಗಳನ್ನು ಉಲ್ಲಂಘನೆ ಮಾಡಿ 3 ನೇ ಎದುರುದಾರರು 1 ನೇ ಎದುರುದಾರರಿಗೆ ಟ್ರೈಲರ್ ಕೆಎ.44.ಟಿಎ.2428 ನ್ನು ಕೊಟ್ಟಿದ್ದರು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. 1 ನೇ ಎದುರುದಾರರ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಉಂಟಾಗಿದೆ ಎಂದರೆ ಸರಿ. ಅದರಂತೆ ಪೊಲೀಸರು 1 ನೇ ಎದುರುದಾರರ ವಾಹನದ ಚಾಲಕನ ವಿರುದ್ಧ ಕೇಸನ್ನು ಹಾಕಿದ್ದರು ಎಂದರೆ ಸರಿ. 3 ನೇ ಎದುರುದಾರರ ಟ್ರಾಕ್ಟರ್ ಗೆ ಟ್ರೈಲರ್ ಕೆಎ.44.ಟಿಎ.2428 ನ್ನು ಜೋಡಣೆ ಮಾಡಿರುವ ಕಾರಣ ಪರಿಹಾರ ಕೊಡಲು ಅವರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ 3 ನೇ ಎದುರುದಾರರ ಟ್ರಾಕ್ಟರ್ ಕೆಎ.44.ಟಿ.1801 ವಾಹನವು ಟ್ರೈಲರ್ ಕೆಎ.44.ಟಿಎ.2428 ನ್ನು ಜೋಡಣೆ ಮಾಡಿಲ್ಲದೇ ಇರುವ ಕಾರಣ 4 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KATK800078202021/truecopy/order-3.pdf

www.ecourtsindia.com

3. ಅಪಘಾತದ ಬಗ್ಗೆ ನಮ್ಮ ಅತ್ತೆ ದೂರನ್ನು ಕೊಟ್ಟಿರುತ್ತಾರೆ. ದೂರಿನಲ್ಲಿ ಟ್ರೈಲರ್ ಬಗ್ಗೆ ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಐ.ಎಂ.ವಿ ವರದಿಯಲ್ಲೂ ಟ್ರೈಲರ್ ತಪಾಸಣೆಯನ್ನು ಮಾಡಿರುವುದಿಲ್ಲ, 1 ನೇ ಎದುರುದಾರರ ಟ್ರಾಕ್ಟರ್ ನ್ನು ಮಾತ್ರ ಪರಿಶೀಲನೆ ಮಾಡಲಾಗಿದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಟ್ರೈಲರ್ ಅಪಘಾತದಲ್ಲಿ ಭಾಗಿಯಾಗಿಲ್ಲದಿದ್ದರೂ ಪೊಲೀಸರ ಜೊತೆ ಶಾಮೀಲಾಗಿ ಪರಿಹಾರ ಪಡೆಯುವ ಉದ್ದೇಶದಿಂದ 3 ನೇ ಎದುರುದಾರರ ಟ್ರೈಲರ್ ನ್ನು ಸುಳ್ಳಾಗಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.**

This is a True Copy of the Court Records Online. Authenticated @ districts.ecourtsindia.com/cnr/KATK800078202021/truecopy/order-3.pdf